ಕರ್ನಾಟಕ ವಿಧಾನ ಪರಿಷತ್ತು

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	433
02.	ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
03.	ಉತ್ತರಿಸುವ ದಿನಾಂಕ	:	16.12.2021
04.	ಉತ್ತರಿಸುವ ಸಚಿವರು	:	ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ಆರಕ್ಷಕ ಪೇದೆ ಹುದ್ದೆಯಿಂದ ಆರಕ್ಷಕ ನಿರೀಕ್ಷಕರ ಹುದ್ದೆಗಳವರೆಗೆ ಬಡ್ತಿ ಮೂಲಕ ತುಂಬಬೇಕಾದ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ವರ್ಗವಾರು ವಿವರ ನೀಡುವುದು)	ಪೊಲೀಸ್ ಇಲಾಖೆಯಲ್ಲಿ ಒಟ್ಟು 1,239 ಹುದ್ದೆಗಳನ್ನು ಆರಕ್ಷಕ ಪೇದೆ ಹುದ್ದೆಯಿಂದ ಆರಕ್ಷಕ ನಿರೀಕ್ಷಕರ ಹುದ್ದೆಗಳವರೆಗೆ ಭರ್ತಿ ಮಾಡಬೇಕಾಗಿರುತ್ತದೆ. ವರ್ಗಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.
ಆ)	ಆರಕ್ಷಕ ನಿರೀಕ್ಷಕ ಹುದ್ದೆಯಿಂದ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಹುದ್ದೆಯವರೆಗೆ ಬಡ್ತಿ ಮೂಲಕ ತುಂಬಬೇಕಾದ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ವರ್ಗವಾರು ವಿವರ ನೀಡುವುದು);	03 ಹುದ್ದೆಗಳು ಮಾತ್ರ ಉಪ ಪೊಲೀಸ್ ಅಧೀಕ್ಷಕರ ಹುದ್ದೆಯಿಂದ ಹೆಚ್ಚುವರಿ ಪೊಲೀಸ್ ಅಧೀಕ್ಷಕರ ಹುದ್ದೆಗೆ ಮುಂಬಡ್ತಿಯಿಂದ ಭರ್ತಿ ಮಾಡಬೇಕಾಗಿರುತ್ತದೆ. ಅದರಲ್ಲಿ 02 ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಸ್ಥಳ ನಿರೀಕ್ಷಣೆಯಲ್ಲಿರುತ್ತಾರೆ.
ಇ)	ಸದರಿ ಖಾಲಿ ಹುದ್ದೆಗಳನ್ನು ಯಾವ ಸಮಯದಿಂದ ಭರ್ತಿ ಮಾಡಲಾಗಿರುವುದಿಲ್ಲ;	ಪೊಲೀಸ್ ಇಲಾಖೆಯಲ್ಲಿ ಪ್ರತಿ ತಿಂಗಳು 15ರ ಒಳಗಾಗಿ ಮುಂಬಡ್ತಿ ಹುದ್ದೆಗಳನ್ನು ಭರ್ತಿ ಮಾಡಲು ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ, ಪೊಲೀಸ್ ಇಲಾಖೆಯ ವಿವಿಧ ವೃಂದಗಳಲ್ಲಿ ಕಾಲಕಾಲಕ್ಕೆ ಉದ್ಭವಿಸುವ ಮುಂಬಡ್ತಿ ಹುದ್ದೆಗಳನ್ನು ಅರ್ಹ ಅಭ್ಯರ್ಥಿಗಳು ಲಭ್ಯವಾದ ನಂತರ ಅರ್ಹತೆ ಮತ್ತು ಜೇಷ್ಠತೆಯ ಆಧಾರದ ಮೇಲೆ ಹಾಗೂ ಪೊಲೀಸ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮುಂಬಡ್ತಿಯನ್ನು ನೀಡಲಾಗುತ್ತಿರುತ್ತದೆ. ಈ ಕೆಳಗಿನ ಕಾರಣಗಳಿಂದಾಗಿ ಹುದ್ದೆಗಳನ್ನು ಭರ್ತಿ ಮಾಡಲು ವಿಳಂಬವಾಗಿರುತ್ತದೆ: 1. ಮುಂಬಡ್ತಿಗೆ ನಿಗಧಿಪಡಿಸಿರುವ ಕನಿಷ್ಟ ಅವಧಿ ಪೂರೈಸಿದ ಸಿಬ್ಬಂದಿಗಳು ಲಭ್ಯವಿರುವುದಿಲ್ಲ. 2. ಕೆ.ಎಸ್.ಐ.ಎಸ್.ಎಫ್. ಹುದ್ದೆಗಳು 2011 ರಲ್ಲಿ ಸೃಜಿಸಲಾಗಿದ್ದು ಮತ್ತು ಕೆ.ಎಸ್.ಆರ್.ಪಿ. ಬ್ಯಾಂಡ್ಸ್‌ಮ್ಯಾನ್ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳು 2020 ರಲ್ಲಿ ಜಾರಿಗೆ ಬಂದಿದ್ದು, ಸದರಿ ನಿಯಮಗಳಲ್ಲಿ ನಿಗಧಿಪಡಿಸಿದ ಕನಿಷ್ಟ ಸೇವೆಯನ್ನು ಪೂರೈಸಿದ ಸಿಬ್ಬಂದಿಗಳು ಲಭ್ಯವಿರುವುದಿಲ್ಲ. 3. ಅಕ್ಟೋಬರ್/ ನವೆಂಬರ್ 2021 ರಲ್ಲಿ ಹುದ್ದೆಗಳು ರಿಕ್ತವಾಗಿದ್ದು, ಮುಂಬಡ್ತಿ ಪ್ರಕ್ರಿಯೆ ಚಾಲ್ತಿಯಿಂದಾಗಿ ಬಾಕಿ ಇರುತ್ತದೆ. 4. ನಿರಂತರವಾಗಿ ಮುಂಬಡ್ತಿ ನೀಡಿದ ನಂತರವೂ ಮುಂಬಡ್ತಿ ಪರಿತ್ಯಜನೆಯಿಂದಾಗಿ ಹುದ್ದೆಗಳು ರಿಕ್ತವಾಗಿರುತ್ತದೆ.
ಈ)	ಭರ್ತಿ ಮಾಡುವಲ್ಲಿ ಆಗಿರುವ ವಿಳಂಬಕ್ಕೆ ಕಾರಣಗಳೇನು;	

ಕ್ರ.ಸಂ	ಪ್ರಶ್ನೆ	ಉತ್ತರ
		5. ನಿಯೋಜನೆ ಘಟಕದಲ್ಲಿನ (ರಾಜ್ಯ ಗುಪ್ತವಾರ್ತೆ, ಸಿ.ಐ.ಡಿ., ಎ.ಸಿ.ಬಿ., ಐ.ಎಸ್.ಡಿ. ಇತ್ಯಾದಿ) ರಿಕ್ತ ಹುದ್ದೆಗಳಿಗೆ ಸಂದರ್ಶನ ಮಾಡಿ ಆಯ್ಕೆ ಮಾಡಬೇಕಾಗಿರುತ್ತದೆ.
ಉ)	ಬಡ್ತಿ ನೀಡದಿರುವುದರಿಂದ ಆಡಳಿತ ವ್ಯವಸ್ಥೆಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು ಬಂದಿರುತ್ತದೆ
ಊ)	ಯಾವ ಕಾಲಮಿತಿಯಲ್ಲಿ ಬಡ್ತಿ ಮೂಲಕ ಸದರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?	ಖಾಲಿ ಇರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾದ ನಂತರ ಅರ್ಹತೆ ಮತ್ತು ಜೇಷ್ಠತೆಯ ಆಧಾರದ ಮೇಲೆ ಹಾಗೂ ಪೊಲೀಸ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮುಂಬಡ್ತಿಯನ್ನು ನೀಡಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.

ಒಇ 190 ಪಿಪಿಎಸ್ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 433 ಕ್ಕೆ ಅನುಬಂಧ

ಕ್ರ. ಸಂ.	ಹುದ್ದೆ	ಮುಂಬಡ್ತಿ ಹುದ್ದೆಗಳ ಸಂಖ್ಯೆ
1.	ಸಿ.ಹೆಚ್.ಸಿ.	131
2.	ಎ.ಹೆಚ್.ಸಿ.	146
3.	ಹೆಚ್.ಸಿ. (ವೈರ್‌ಲೆಸ್)	130
4.	ಸ್ಪೆ.ಆರ್.ಹೆಚ್.ಸಿ.	168
5.	ಎ.ಎಸ್.ಐ.	23
6.	ಎ.ಆರ್.ಎಸ್.ಐ.	60
7.	ಎ.ಎಸ್.ಐ. (ವೈರ್‌ಲೆಸ್)	32
8.	ಎ.ಎಸ್.ಐ. (ಕೆ.ಎಸ್.ಆರ್.ಪಿ.)	60
9.	ಎ.ಎಸ್.ಐ. (ಬ್ಯಾಂಡ್‌ಮ್ಯಾನ್)	56
10.	ಎ.ಎಸ್.ಐ. (ಕೆ.ಎಸ್.ಐ.ಎಸ್.ಎಫ್.)	378
11.	ಪಿ.ಎಸ್.ಐ.	01
12.	ಆರ್.ಎಸ್.ಐ.	40
13.	ಸ್ಪೆ.ಆರ್.ಎಸ್.ಐ.	14
		1239